# ಹಿನ್ನೆಲೆ ಗಾಯನದ ಕನಸಿನಲ್ಲಿ...

**ಆರಾಧ್ಯಾ ರಾವ್**
ಝೀ ಕನ್ನಡ 'ಸರಿಗಮಪ'
21ರ ರನ್ನರ್ ಅಪ್



◆ **ನಿಮ್ಮ ಪರಿಚಯ ಹೇಳಬಹುದಾ?**

ಆರನೇ ತರಗತಿಯಲ್ಲಿ ಓದುತ್ತಿದ್ದೇನೆ. ಅಮ್ಮ ಪೂರ್ಣಿಮಾ ರಾವ್, ನಾನು ಓದುವ ಶಾಲೆಯಲ್ಲೇ ಅಧ್ಯಾಪಕಿ. ಅಪ್ಪ ಶ್ರೀಕಾಂತ್, ಸಾಫ್ಟ್‌ವೇರ್ ಎಂಜಿನಿಯರ್. ಅಣ್ಣ ಗುರುತೇಜಸ್, 9ನೇ ತರಗತಿಯಲ್ಲಿ ಓದುತ್ತಿದ್ದಾನೆ.

◆ **ಆಡಿಷನ್ ದಿನಗಳು ಹೇಗಿದ್ದವು?**

ಶರಧಿ ಪಾಟೀಲ್ ಅವರ ಹತ್ತಿರ ಗಾಯನ ಕಲಿತಾ ಇದ್ದೆ. ಇನ್‌ಸ್ಟಾದಲ್ಲಿ 'ಸರಿಗಮಪ' ಸ್ಪರ್ಧೆಯ ಪೋಸ್ಟರ್ ನೋಡಿ ಪ್ರಯತ್ನ ಮಾಡಿದೆ. ಮೆಗಾ ಆಡಿಷನ್ ಪೂರ್ವದಲ್ಲಿ ನಾಲ್ಕು ಸುತ್ತಿನ ಪರೀಕ್ಷೆ ಮಾಡಿದರು. ಅದಕ್ಕೆಲ್ಲ ಸ್ವಲ್ಪ ದೀರ್ಘ ಸಮಯವೇ ಬೇಕಾಗುತ್ತದೆ. ಮೊದಲ ಸುತ್ತಿನಲ್ಲಿ ನಮ್ಮ ಇಷ್ಟದ ಆಯ್ಕೆಯ ಹಾಡಿಗೆ ಅವಕಾಶ ಇತ್ತು. ಎರಡನೇ ಸುತ್ತಿನಲ್ಲಿ ಶಾಸ್ತ್ರೀಯ ಸಂಗೀತ, ನಂತರ ಜನಪದ ಮತ್ತು ಭಾವಗೀತೆಯನ್ನು ಕೇಳಿದರು. ನಾಲ್ಕನೇ ಸುತ್ತಾದ ಮೇಲೆ ವೀಕ್ಷಕರ ಪ್ರತಿಕ್ರಿಯೆ, ಮೆಚ್ಚುಗೆಯನ್ನೂ ಇನ್‌ಸ್ಟಾದಲ್ಲಿ ಪ್ರಕಟಿಸಿದ್ದರು. ಮೆಗಾ ಆಡಿಷನ್ ಪಟ್ಟಿಯಲ್ಲಿ ಟಾಪ್ 22ರಲ್ಲಿ ನನ್ನ ಹೆಸರಿತ್ತು.

◆ **ಸಂಗೀತ ಕಲಿಕೆಯ ಪ್ರೀತಿ ಹುಟ್ಟಿದ್ದು ಹೇಗೆ?**

ನಮ್ಮ ಅಮ್ಮನಿಗೆ ಸಂಗೀತ ಅಭ್ಯಾಸ ಮಾಡುವ ಉತ್ಕಟ ಆಸೆಯಿತ್ತಂತೆ. ಸೌಲಭ್ಯ, ಸಮಯ ಮತ್ತು ಅವಕಾಶದ ತೊಂದರೆಯಿಂದ ಕಲಿಯಲು ಸಾಧ್ಯ ಆಗಿರಲಿಲ್ಲ. ಅವರು ನನ್ನ ಮೂಲಕ ತಮ್ಮ ಪ್ಯಾಶನ್ ನೋಡ ಬಯಸಿ ನನಗೆ ಸಂಗೀತ ಕಲಿಸಲು ಬಯಸಿದರು. ಅಚ್ಚರಿ ಎಂದರೆ ಸಹಜವಾಗಿ ಆ ಕಲೆ ನನ್ನಲ್ಲಿ ಇತ್ತು. ನನ್ನ ಅಣ್ಣ ಸಂಗೀತ ಶಾಲೆಗೆ ಮೊದಲೇ ಹೋಗುತ್ತಿದ್ದ. ಅವನ ಜೊತೆ ನನ್ನನ್ನೂ ಕರೆದುಕೊಂಡು ಹೋಗುತ್ತಿದ್ದರು. ಆಗ ನನಗೆ ಮೂರು ವರ್ಷ. ಸಂಗೀತ ಕೇಳಿ ಬರುತ್ತಿದ್ದ ನಾನು ಮನೆಯಲ್ಲಿ ಹಾಡುತ್ತಿದ್ದೆ. ನಮ್ಮ ಅಮ್ಮನಿಗೆ ಅದು ಆಶ್ಚರ್ಯ ಆಗುತ್ತಿತ್ತು. ಹಾಗಾಗಿ ನನಗೆ ಐದು ವರ್ಷ ತುಂಬುವಷ್ಟರಲ್ಲಿ ಶಾಸ್ತ್ರೀಯವಾಗಿ ಅಭ್ಯಾಸವನ್ನು ಆರಂಭಿಸಿದರು. ಮೊದಲು ಎರಡು ವರ್ಷ ಆನ್‌ಲೈನ್ ಕಲಿತೆ. ನಂತರ ಗುರುಗಳ ಸಾನ್ನಿಧ್ಯದಲ್ಲೇ ಕಲಿಯುತ್ತಿದ್ದೇನೆ. ಕರ್ನಾಟಕ ಸಂಗೀತ ಕಲಿಕೆಗೆ ನಾಲ್ಕು ವರ್ಷ ತುಂಬಿದೆ. ಬಾಲಿವುಡ್ ಸಂಗೀತವನ್ನೂ ಕಲಿಯುತ್ತಿದ್ದೇನೆ.

◆ **ಓದು, ಆಟ, ಸಂಗೀತ, ಸ್ಪರ್ಧೆಯ ಒತ್ತಡವನ್ನು ಹೇಗೆ ನಿಭಾಯಿಸಿದಿರಿ?**

ನಮ್ಮ ಶಾಲೆಯ ಅಧ್ಯಾಪಕರು ಎಲ್ಲ ರೀತಿಯಿಂದಲೂ ಸಹಕರಿಸಿದರು. ಏಪ್ರಿಲ್ ತಿಂಗಳಲ್ಲಿ 5ನೇ ತರಗತಿ ಪರೀಕ್ಷೆ ಇತ್ತು. ಅಲ್ಲಿಯ ತನಕ ರಜೆ ಕೊಟ್ಟಿದ್ದರು. ಪಾಠ–ನೋಟ್ಸ್‌ಗಳಿಗೆ ಗೆಳೆಯರು ಸಹಾಯ ಮಾಡಿದರು. ಆನ್‌ಲೈನ್‌ನಲ್ಲಿ ಪರೀಕ್ಷೆ ಬರೆಯುವ ಅವಕಾಶ ಮಾಡಿಕೊಟ್ಟರು. ಸ್ಪರ್ಧೆಯ ಜೊತೆ ಕಲಿಕೆ, ಆಟ ಎಲ್ಲವನ್ನೂ ನಿರ್ವಹಿಸುವ ಅಗತ್ಯ ಇತ್ತು. ಅದೆಲ್ಲದಕ್ಕೂ ಸೂಕ್ತವಾಗಿ ವೇಳಾಪಟ್ಟಿಯನ್ನು ಸಿದ್ಧಪಡಿಸಿಕೊಂಡು ಅದನ್ನು ಅನುಸರಿಸಿದ್ದರಿಂದ ಎಲ್ಲ ಸರಾಗವಾಗಿ ನೆರವೇರಿತು. ಇದರ ಜೊತೆ ಭರತನಾಟ್ಯವನ್ನು ಐದು ವರ್ಷಗಳಿಂದ ಅಭ್ಯಾಸ ಮಾಡುತ್ತಿದ್ದೇನೆ. ಇತ್ತೀಚೆಗೆ ಹಿಂದೂಸ್ತಾನಿ ಸಂಗೀತವನ್ನೂ ಕಲಿಯಲು ಆರಂಭಿಸಿದ್ದೇನೆ. ಚಿತ್ರಕಲೆಯನ್ನೂ ಕಲಿಯುತ್ತಿದ್ದೇನೆ. ಬ್ಯಾಡ್ಮಿಂಟನ್ ಆಡುತ್ತೇನೆ. ಇದೆಲ್ಲ ನಿರಂತರವಾಗಿ ನಡೆಯುತ್ತಿದೆ.

◆ **ಕನ್ನಡ ಭಾಷಾ ಸ್ಪಷ್ಟತೆಯ ಬಂದಿದ್ದು ಹೇಗೆ?**

ಮನೆಯಲ್ಲಿ ತುಳು ಮಾತನಾಡುವುದು. ಅಮ್ಮ ಹೈದರಾಬಾದಿನಲ್ಲಿ ಬೆಳೆದಿರುವುದು. ಅವರಿಗೆ ತುಳು–ತೆಲುಗು ಗೊತ್ತಿತ್ತು. ಅಪ್ಪನಿಗೆ ಕನ್ನಡ ಚೆನ್ನಾಗಿ ಗೊತ್ತು. ಈಗ ನಾವು ಬೆಂಗಳೂರಿನಲ್ಲಿಯೇ ನೆಲೆಸಿದ್ದೇವೆ. ನಮ್ಮ ನೆರೆಹೊರೆಯವರ ಒಡನಾಟ ಕನ್ನಡದಲ್ಲಿಯೇ ಮಾಡುತ್ತೇನೆ. ಓದುವ ವಿಷಯದಲ್ಲಿ ಅಪ್ಪ ಸಹಾಯ ಮಾಡುತ್ತಿದ್ದರು. 'ಸರಿಗಮಪ' ಸ್ಪರ್ಧೆಗೆ ಸೇರಿದ ಮೇಲೆ ನನ್ನ ಕನ್ನಡ ಇನ್ನೂ ಚೆನ್ನಾಗಿ ಆಯಿತು. ಅಲ್ಲಿ ಕನ್ನಡದ ವಾತಾವರಣ ತುಂಬ ಚೆನ್ನಾಗಿತ್ತು.

◆ **ಭವಿಷ್ಯದ ಕನಸಿನ ಬಗ್ಗೆ ಸದ್ಯ ಕಲ್ಪನೆ ಏನಿದೆ?**

ಬಹುಭಾಷೆಯಲ್ಲಿ ಹಾಡಬೇಕು. ಹಿನ್ನೆಲೆ ಗಾಯಕಿ ಆಗಿ ಬೆಳೆಯಬೇಕು ಎನ್ನುವುದು ನನ್ನ ಕನಸು. ಇದರ ಜೊತೆ ಓದುವುದು ಮುಖ್ಯ. ಹವ್ಯಾಸ ಮತ್ತು ಶಿಕ್ಷಣವನ್ನು ಸಮಾನಾಂತರವಾಗಿ ತೆಗೆದುಕೊಂಡು ಹೋಗಬೇಕು. ಓದುವುದು ಬಹಳ ಮುಖ್ಯ ಎನ್ನುವುದು ನನ್ನ ಭಾವನೆ. ಕಲೆ ಒಂದೇ ಇದ್ದರೆ ಆಗದು, ನಮ್ಮ ಬೌದ್ಧಿಕ ವಿಕಾಸ ಮತ್ತು ಜ್ಞಾನವನ್ನು ಶಿಕ್ಷಣದಿಂದಲೇ ಪಡೆಯಬೇಕು.

◆ **ನಿಮ್ಮ ಫ್ಯಾನ್ಸ್ ನೋಡಿದಾಗ ಏನೆನಿಸುತ್ತದೆ?**

ಉಡುಪಿಗೆ ಹೋದಾಗ ನಮ್ಮ ಹುಡುಗಿ ಎಂದು ಕೊಂಡಾಡುತ್ತಾರೆ. 'ಸರಿಗಮಪ'ದಲ್ಲಿ ಅವರೇ ಗೆದ್ದಷ್ಟು ಸಂಭ್ರಮವನ್ನು ತೋರಿಸುತ್ತಾರೆ. ಅಪ್ಪಿ ಮುದ್ದಾಡುತ್ತಾರೆ. ಸೆಲ್ಫಿ ಫೋಟೊ ತೆಗೆದುಕೊಳ್ಳುತ್ತಾರೆ. ಸರಿಗಮಪ ಅತಿ ದೊಡ್ಡ ರಿಯಾಲಿಟಿ ಶೋ. ಸ್ಪರ್ಧೆಗೆ ಆಯ್ಕೆ ಆಗುವುದೇ ದೊಡ್ಡ ಸಾಧನೆ. ಅಂತಹ ದೊಡ್ಡ ಸ್ಪರ್ಧೆಯಲ್ಲಿ ನಾನು ಎರಡನೇ ಸ್ಥಾನವನ್ನು ಪಡೆದಿದ್ದೇನೆ. ನನಗೂ ಅದು ಖುಷಿಯನ್ನು ಕೊಟ್ಟಿದೆ. ಸಂಗೀತ ಪ್ರೇಮಿಗಳಿಗೆ ಹೆಮ್ಮೆ ಅನ್ನಿಸುತ್ತದೆ.

■ **ರಾಘವೇಂದ್ರ ಕೆ.**